# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 44/ 2017**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಮೂಕ ರಂಗಪ್ಪ | ಫ್ರಾಸಾಃ **07** |
| ತಂದೆ ಹೆಸರುಃ | ರಂಗಪ್ಪ | ಚಾಸಾಃ **06** |
| ವಯಸ್ಸುಃ | **64** ವರ್ಷ | ದಿಃ **06-11-2024** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಮಾನಸಗಲ್ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾಃ 1 ನನ್ನ ಮಗಳು, ಚಾಸಾಃ 7 ನನ್ನ ಹೆಂಡತಿ ಹಾಗೂ ಚಾಸಾಃ 8 ನನ್ನ ಮಗ ಆಗಿರುತ್ತಾನೆ. ನನಗೆ ಚಾಸಾಃ 9 ರಿಂದ 27 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಳಿಯ ಆಗಬೇಕು. 2 ನೇ ಆರೋಪಿ 1 ನೇ ಆರೋಪಿಯ ತಾಯಿಯಾಗಿರುತ್ತಾರೆ. 3 ನೇ ಆರೋಪಿ ಯಾರು ಎಂದು ನನಗೆ ಗೊತ್ತಿಲ್ಲ.

ಈಗ 12 ವರ್ಷಗಳ ಹಿಂದೆ ಚಾಸಾಃ 1 ರವರನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದು, ಮದುವೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರ ಕುಟುಂಬಕ್ಕೆ ನಾವುಗಳು ರೂ.2 ಲಕ್ಷ ನಗದು ಹಣ ಹಾಗೂ 25 ಗ್ರಾಂ ಚಿನ್ನಾಭರಣ ಕೊಟ್ಟಿರುತ್ತೇವೆ. ಆದರೂ ಸಹ ಮದುವೆಯಾದ ನಂತರ 1 ಮತ್ತು 2 ನೇ ಆರೋಪಿತರು ಚಾಸಾಃ 1 ರವರಿಗೆ ಹೆಚ್ಚಿನ ವರದಕ್ಷಣೆ ತರುವಂತೆ ಕಿರುಕುಳ ನೀಡಿರುತ್ತಾರೆ. ಆ ನಂತರ 1 ನೇ ಆರೋಪಿ ಕಾನೂನು ಬಾಹಿರವಾಗಿ 2 ನೇ ಮದುವೆ ಮಾಡಿಕೊಂಡಿರುತ್ತಾರೆ. ಆ ನಂತರ ನ್ಯಾಯ ಪಂಚಾಯಿತಿ ಮಾಡಿಸಿದ್ದು, ಆರೋಪಿತರು ಹಿರಿಯರ ಮಾತು ಕೇಳದ ಕಾರಣ ದೂರು ದಾಖಲು ಮಾಡಿದ್ದೆವು. ನ್ಯಾಯ ಪಂಚಾಯಿತಿ ಸಮಯದಲ್ಲಿ 1 ನೇ ಆರೋಪಿ ನನ್ನ ಮಗನಾದ ಚಾಸಾಃ 13 ರವರಿಗೆ ಹೊಡೆದಿದ್ದನು. ದೂರು ದಾಖಲಾದ ನಂತರ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿದ್ದರು.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>

ಚಾಸಾಃ 1 ಮತ್ತು 1 ನೇ ಆರೋಪಿ ಮದುವೆಯಾದ ನಂತರ 03 ವರ್ಷದ ವರೆಗೆ ಚೆನ್ನಾಗಿ ವೈವಾಹಿಕ ಜೀವನ ನಡೆಸಿದ್ದು, ಅವರಿಗೆ ಒಬ್ಬ ಮಗಳು ಜನಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ತವರು ಮನೆಯಿಂದ ವರದಕ್ಷಣೆ ತರುವಂತೆ ಕಿರುಕುಳ ನೀಡುತ್ತಿದ್ದ ವಿಷಯವನ್ನು ನನಗೆ ಚಾಸಾಃ 1 ರವರು ತಿಳಿಸಿದ್ದರು ಎಂದರೆ ಸರಿ. ಚಾಸಾಃ 1 ರವರು ಗರ್ಬಿಣಿಯಾಗಿದ್ದಾಗ ಅವರನ್ನು ತವರು ಮನೆಗೆ ಕರೆದುಕೊಂಡು ಹೋಗಿದ್ದು, ಹೆಣ್ಣು ಮಗು ಜನಿಸಿದ ನಂತರ ಆರೋಪಿ ಮಗು ನೋಡಲು ಬಂದಿರಲಿಲ್ಲ ಎಂದರೆ ಸರಿ. ಆ ನಂತರ ನಾನೇ ಚಾಸಾಃ 1 ರವರನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿದ್ದು, ಆಗ 2 ನೇ ಆರೋಪಿ ನಮ್ಮ ಮನೆಗೆ ಬರಬೇಡ ಎಂದು ಬೈದಿದ್ದರು ಎಂದರೆ ಸರಿ. ನಂತರ ರಾತ್ರಿ 1 ನೇ ಆರೋಪಿ ಬಂದು ಚಾಸಾಃ 1 ರವರಿಗೆ ಬೈದು ಖಲಾಸ್ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದರು ಎಂದರೆ ಸರಿ. ಅಲ್ಲದೇ ಆರೋಪಿತರು ರೂ.3 ಲಕ್ಷ ಹಣ ನೀಡುವಂತೆ ಬೇಡಿಕೆ ಇಟ್ಟಿದ್ದರು ಎಂದರೆ ಸರಿ. ಆದರೂ ನಾನು ಸಮಜಾಯಿಸಿ ಹೇಳಿ ಚಾಸಾಃ 1 ರವರನ್ನು ಗಂಡನ ಮನೆಯಲ್ಲಿ ಬಿಟ್ಟು ಬಂದಿದ್ದೆನು ಎಂದರೆ ಸರಿ. ಆ ನಂತರ ಚಾಸಾಃ 1 ರವರು ಆರೋಪಿತರು ವರದಕ್ಷಣೆ ತರುವಂತೆ ಹೊಡೆದು ಮನೆಯಿಂದ ಹೊರ ಹಾಕಿದ್ದಾರೆ ಎಂದು ತವರು ಮನೆಗೆ ಬಂದಿರುತ್ತಾರೆ ಎಂದರೆ ಸರಿ. ಅ ನಂತರ 1 ನೇ ಆರೋಪಿ 3 ನೇ ಆರೋಪಿಯನ್ನು 2 ನೇ ಮದುವೆ ಮಾಡಿಕೊಂಡಿದ್ದಾರೆ ಎಂದು ನಮಗೆ ಆತನ ಮನೆಯ ಅಕ್ಕ-ಪಕ್ಕದವರಿಂದ ತಿಳಿದು ಬಂದಿತ್ತು ಎಂದರೆ ಸರಿ. ಆ ನಂತರ ನಾವು ದೂರು ನೀಡಿದ್ದೆವು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಡಿ.ವಿ ವಕೀಲರಿಂದಃ</u>

1 ನೇ ಆರೋಪಿ ಚಾಸಾಃ 13 ರವರಿಗೆ ಹೊಡೆದಿರುತ್ತಾನೆ ಎಂದು ಪೋಲಿಸರ ಮುಂದೆ ನೀಡಿರುವ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ. ಚಾಸಾಃ 1 ರವರು 2013 ರಿಂದ 2019 ವರೆಗೆ ಯಾದಗಿರಿಯಲ್ಲಿ ಪದವಿ ವಿದ್ಯಾಬ್ಯಾಸ ಮಾಡಿದ್ದಾರೆ ಎಂದರೆ ಸರಿ. 1 ನೇ ಆರೋಪಿಯೇ ಚಾಸಾಃ 1 ರವರನ್ನು ಪದವಿ ವಿದ್ಯಾಬ್ಯಾಸ ಮಾಡಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಕುಟಂಬಕ್ಕೆ 4-5 ಎಕರೆ ಒಣ ಬೇಸಾಯದ ಭೂಮಿ ಮಾತ್ರ ಇದೆ. ಮದುವೆ ಸಮಯದಲ್ಲಿ 2 ಲಕ್ಷ ನಗದು ಹಣ ಹಾಗೂ ಚಿನ್ನಾಭರಣ ನೀಡಿರುವುದಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಹಣ ಮತ್ತು ಚಿನ್ನಾಭರಣ ನೀಡಲು ನಿಮಗೆ

ಅದಾಯ ಇಲ್ಲ ಎಂದರೆ ಸಾಕ್ಷಿಯು ನನ್ನ 02 ಎಕರೆ ಜಮೀನು ಮಾರಾಟ ಮಾಡಿ ಸದರಿ ವರದಕ್ಷಣೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಜಮೀನು ಮಾರಾಟ ಮಾಡಿರುವ ಬಗ್ಗೆ ಪೋಲಿಸರ ಮುಂದೆ ನಾನು ತಿಳಿಸಿಲ್ಲ ಎಂದರೆ ಸರಿ. ಆರೋಪಿತರು ಯಾವ ದಿನಾಂಕದಂದು ಯಾವ ಸಮಯಕ್ಕೆ ಚಾಸಾಃ 1 ರವರಿಗೆ ಹೊಡಿ-ಬಡಿ ಮಾಡಿರುತ್ತಾರೆ ಎಂದು ನಾನು ಪೋಲಸಿರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ಮಾನಸಗಲ್ ಗ್ರಾಮದಿಂದ ದೇವದುರ್ಗ 15 ಕಿ.ಮೀ ದೂರ ಇದೆ ಎಂದರೆ ಸರಿ. ದೇವದುರ್ಗದಿಂದ ಯಾದಗಿರಿ 65 ಕಿ.ಮೀ ದೂಜರ ಇದೆ ಎಂದರೆ ಸರಿ. ಯಾದಗಿರಿಯಿಂದ ಕೋಟಗೇರಾ ಗ್ರಾಮ 20 ಕಿ.ಮೀ ದೂರ ಇದೆ ಎಂದರೆ ಸರಿ. ಕೋಟಗೇರಾ ಗ್ರಾಮದ ಆರೋಪಿತರ ಮನೆಯ ಅಕ್ಕ-ಪಕ್ಕ ಯಾರ ಮನೆಗಳು ಇದ್ದಾವೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾಃ 1 ರವರು ರಾಯಚೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿ 1 ನೇ ಆರೋಪಿ ಕಡೆಯಿಂದ ಜೀವನಾಂಶ ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿ. 1 ನೇ ಆರೋಪಿಯ ತಂಗಿ ಮತ್ತು ಮಗಳನ್ನು ಅವರ ಗಂಡ ತವರು ಮನೆಯಲ್ಲಿ ಬಿಟ್ಟು ದುಡಿಯಲು ಬೆಂಗಳೂರಿಗೆ ಹೋಗಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾಃ 1 ಮತ್ತು ಆರೋಪಿತರ ನಡುವೆ ಮನಸ್ತಾಪ ಉಂಟಾಗಿತ್ತು ಎಂದರೆ ಸರಿಯಲ್ಲ.

ಆರೋಪಿತರು ರೂ.3 ಲಕ್ಷ ಹೆಚ್ಚಿನ ವರದಕ್ಷಣೆ ನೀಡುವಂತೆ ಬೇಡಿಕೆ ಇಟ್ಟಿದ್ದರು ಎಂಬುದನ್ನು ನಾನು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿ. ಚಾಸಾಃ 1 ರವರನ್ನು ಓದಿಸುವ ಕಾಲಕ್ಕೆ ಅವರಿಗೆ ಹೆಣ್ಣು ಮಗು ಆಗಿದ್ದು, ಅವರ ಮತ್ತು 1 ನೇ ಆರೋಪಿಯ ದಾಂಪತ್ಯ ಜೀವನ ಚೆನ್ನಾಗಿಯೇ ಇತ್ತು ಎಂದರೆ ಸರಿಯಲ್ಲ. 2 ನೇ ಆರೋಪಿ ತಮ್ಮ ಮನಗೆ ಬರಬೇಡ ಎಂದು ಹೇಳಿದದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿ ಮನೆಯಿಂದ ಹೊರ ಹಾಕಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ 3 ನೇ ಆರೋೂಪಿಯನ್ನು ಮದುವೆ ಮಾಡಿಕೊಂಡಿರವುದಾಗಿ ನಮಗೆ ಅಕ್ಕ-ಪಕ್ಕದವರು ತಿಳಿಸಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರ ಮನೆಯ ಅಕ್ಕ-ಪಕ್ಕದವರ ಪರಿಚಯ ನಿಮಗೆ ಇಲ್ಲ ಎಂದರೆ ಸಾಕ್ಷಿಯು ಪರಿಚಯ ಇದೆ ಆದರೆ ಅವರುಗಳ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪೋಲಿಸರು ಠಾಣೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿದ್ದರು. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾಃ 1 ರವರು ತವರು ಮನೆಯಲ್ಲಿಯೇ ಉಳಿದುಕೊಳ್ಳುವ ಉದ್ದೇಶ ಹೊಂದಿದ್ದು, ನಾವುಗಳು ಅವರನ್ನು ಗಂಡನ ಮನೆಗೆ ಕಳಹಿಸದೇ ಸಂಸಾರ ಹಾಳು ಮಾಡಿರತ್ತೇವೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಸುಳ್ಳು ಹೇಳಿಕೆ ನೀಡಿ ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ

## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 44/ 2017**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀಮತಿ ಯಲ್ಲಮ್ಮ | ಫ್ರಾಸಾಃ **08** |
| ಗಂಡನ ಹೆಸರುಃ | ಮೂಕ ರಂಗಪ್ಪ | ಚಾಸಾಃ **07** |
| ವಯಸ್ಸುಃ | **55** ವರ್ಷ | ದಿಃ **06-11-2024** |
| ಉದ್ಯೋಗಃ | ಕೂಲಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಮಾನಸಗಲ್ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾಃ 1 ನನ್ನ ಮಗಳು, ಚಾಸಾಃ 6 ನನ್ನ ಗಂಡ ಹಾಗೂ ಚಾಸಾಃ 8 ಮತ್ತು 13 ರವರು ನನ್ನ ಮಕ್ಕಳು ಆಗಿರುತ್ತಾರೆ. ನನಗೆ ಚಾಸಾಃ 11 ನನ್ನ ಮಗಳ ಹಾಗೂ ಚಾಸಾಃ 9 ಅವರ ಗಂಡ ಆಗಿರುತ್ತಾರೆ. ಚಾಸಾಃ 10, 12 ಹಾಗೂ 14 ರಿಂದ 27 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಳಿಯ ಆಗಬೇಕು. 2 ನೇ ಆರೋಪಿ 1 ನೇ ಆರೋಪಿಯ ತಾಯಿಯಾಗಿರುತ್ತಾರೆ. 3 ನೇ ಆರೋಪಿ 1 ನೇ ಆರೋಪಿಯ 2 ನೇ ಹೆಂಡತಿ ಆಗಿರುತ್ತಾರೆ.

ಈಗ 12 ವರ್ಷಗಳ ಹಿಂದೆ ಚಾಸಾಃ 1 ರವರನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದು, ಮದುವೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರ ಕುಟುಂಬಕ್ಕೆ ನಾವುಗಳು ರೂ.2 ಲಕ್ಷ ನಗದು ಹಣ ಹಾಗೂ 25 ಗ್ರಾಂ ಚಿನ್ನಾಭರಣ ಕೊಟ್ಟಿರುತ್ತೇವೆ. ಆ ನಂತರ 2-3 ವರ್ಷಗಳ ವರೆಗೆ ಅವರುಗಳು ದಾಂಪತ್ಯ ಜೀವನ ನಡೆಸಿರುತ್ತಾರೆ. ಆ ನಂತರ 1 ನೇ ಆರೋಪಿ ಚಾಸಾಃ 1 ರವರಿಗೆ ನೀನು ತೆಳ್ಳಗೆ, ಗಿಡ್ಡಗೆ ಇದ್ದೀಯಾ ಹಾಗೂ ತಿಂದು ಕುಳಿತುಕೊಳ್ಳುತ್ತೀಯಾ ಎಂದು ಹೇಳಿ ಹೊಡಿ-ಬಡಿ ಮಾಡಿರುತ್ತಾರೆ. ಅಲ್ಲದೇ 1 ನೇ ಆರೋಪಿ ವರದಕ್ಷಣೆ ತವರುಂತೆ ಚಾಸಾಃ 1 ರವರಿಗೆ ಕಿರುಕುಳ ನೀಡಿರುತ್ತಾನೆ. ಚಾಸಾಃ 1 ರವರು ಗರ್ಬಿಯಾಗಿದ್ದಾಗ ಅವರನ್ನು ತವರು ಮನೆಗೆ ಕರೆದುಕೊಂಡು ಬಂದಿದ್ದೆವು. ನಂತರ ಹೆಣ್ಣು ಮಗು ಜನಿಸಿದ್ದರಿಂದ 1 ನೇ ಆರೋಪಿ ಅವರನ್ನು ನೋಡಲು ಬಂದಿರುವುದಿಲ್ಲ. ಆ ನಂತರ ಚಾಸಾಃ 6 ರವರು ಚಾಸಾಃ 1 ರವರನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿದ್ದು, ಆ ಸಮಯದಲ್ಲಿ 3 ನೇ ಆರೋಪಿ 1 ಮತ್ತು 2 ನೇ ಆರೋಪಿತರ ಮನೆಯಲ್ಲಿ ಇದ್ದು, ಚಾಸಾಃ 1 ರವರಿಗೆ ಬೈದು ಕೊಲೆ ಬೆದರಿಕೆ ಹಾಕಿದ್ದರು.

ಅಲ್ಲದೇ 1 ನೇ ಆರೋಪಿ ಚಾಸಾಃ 13 ರವರಿಗೆ ಹೊಡೆದಿರುತ್ತಾರೆ. ಆ ನಂತರ ನ್ಯಾಯ ಪಂಚಾಯಿತಿ ಮಾಡಿಸಿದರೂ ಸಹ ಆರೋಪಿತರು ಮಾತು ಕೇಳದ ಕಾರಣ ದೂರು ದಾಖಲು ಮಾಡಿರುತ್ತೇವೆ. ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನು.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>

ಚಾಸಾಃ 1 ರವರನ್ನು ಅರೂಪಿತರ ಮನೆಗೆ ಕರೆದುಕೊಂಡು ಹೋದಾಗ 1 ಮತ್ತು 2 ನೇ ಆರೋಪಿತರು ಮನೆಗೆ ಬರಬೇಡಾ ಎಂದು ಬೈದಿದ್ದರು ಎಂದರೆ ಸರಿ. 1 ನೇ ಆರೋಪಿ ರಾತ್ರಿ ಬಂದು ಚಾಸಾಃ 1 ರವರಿಗೆ ಬೈದು ರೂ.3 ಲಕ್ಷ ಹಣ ತರುವಂತೆ ಬೇಡಿಕೆ ಇಟ್ಟಿದ್ದರು ಎಂದರೆ ಸರಿ. ಈಗ 07 ವರ್ಷಗಳ ಹಿಂದೆ 1 ಮತ್ತು 2 ನೇ ಆರೋಪಿತರು ಚಾಸಾಃ 1 ರವರಿಗೆ ಬೈದು ಹೊಡಿ-ಬಡಿ ಮಾಡಿ ಕೊಲೆ ಬೆದರಿಕೆ ಹಾಕಿ ಕಳುಹಿಸಿದ್ದರು ಎಂದರೆ ಸರಿ. ಆ ನಂತರ ಚಾಸಾಃ 1 ರವರು ಕಿರುಕುಳ ತಾಳಲಾರದೆ ತವರು ಮನೆಗೆ ಬಂದು ವಿಷಯ ತಿಳಿಸಿದ್ದರು ಎಂದರೆ ಸರಿ. ಆ ನಂತರ 1 ನೇ ಆರೋಪಿ 3 ನೇ ಆರೋಪಿಯೊಂದಿಗೆ ಮದುವೆ ಮಾಡಿಕೊಡಿರುವ ವಿಷಯ ನಮಗೆ ಅಕ್ಕ-ಪಕ್ಕದವರಿಂದ ಗೊತ್ತಾಗಿ ಚಾಸಾಃ 1 ರವರು ಕೇಳಲು ಹೋದಾಗ 3 ನೇ ಆರೋಪಿ ಅವರಿಗೆ ಬೈದು ಕಳುಹಿಸಿದ್ದರು ಎಂದರೆ ಸರಿ. ತಾನು ಸಂಪ್ರದಾಯದಂತೆ 1 ನೇ ಆರೋಪಿಯೊಂದಿಗೆ ಮದುವೆ ಮಾಡಿಕೊಂಡು ನೊಂದಣಿ ಸಹ ಮಾಡಿಕೊಂಡಿರುವುದಾಗಿ ಹೇಳಿ 3 ನೇ ಆರೋಪಿ ಚಾಸಾಃ 1 ರವರಿಗೆ ಬೈದು ಹೊಡಿ-ಬಡಿ ಮಾಡಿ ಕಳುಹಿಸಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಡಿ.ವಿ ವಕೀಲರಿಂದಃ</u>

1 ನೇ ಆರೋಪಿ ಚಾಸಾಃ 13 ರವರಿಗೆ ಹೊಡೆದಿರುತ್ತಾನೆ ಎಂದು ನಾನು ಪೋಲಿಸರ ಮುಂದೆ ನೀಡಿರುವ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ರಾತ್ರಿ ಬಂದು ರೂ.3 ಲಕ್ಷ ಹಣ ನೀಡುವಂತೆ ಬೇಡಿಕೆ ಇಟ್ಟಿದ್ದರು ಎಂಬುದನ್ನು ನಾನು ಪೋಲಿಸರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ಹಣ ಮತ್ತು ಚಿನ್ನಾಭರ ವರದಕ್ಷಣೆಯಾಗಿ ನೀಡಿದ್ದೆವು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ಮತ್ತು 2 ನೇ ಅರೋಪಿತರು ಚಾಸಾಃ 1 ರವರಿಗೆ ಕಿರುಕುಳ ನೀಡುತ್ತಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮದುವೆಯಾದ ನಂತರ ಚಾಸಾಃ 1 ಮತ್ತು 1 ನೇ ಆರೋಪಿ ಅನ್ಯೋನ್ಯವಾಗಿ ಇದ್ದರು ಹಾಗೂ ಅವರಿಗೆ ಅನನ್ಯ ಎಂಬ 02 ವರ್ಷದ ಮಗಳು ಇದ್ದಾಳೆ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆಂದರೆ ಸರಿ. 1 ನೇ ಆರೋಪಿಯೇ ಚಾಸಾಃ 1 ರವರಿಗೆ ಯಾದಗಿರಿಯಲ್ಲಿ ಪದವಿ ವಿದ್ಯಾಭ್ಯಾಸ ಮಾಡಿಸಿದ್ದಾರೆ ಎಂದರೆ ಸರಿ. ಆರೋಪಿತರು ಚಾಸಾಃ 1 ರವರಿಗೆ ಹೊಡಿ-ಬಡಿ ಮಾಡಿ, ಬೈದು ಜೀವದ ಬೆದರಿಕೆ ಹಾಕಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾಃ 1 ರವರನ್ನು ಗಂಡನ ಮನೆಗೆ ಕರೆದುಕೊಂಡು ಹೋದಾಗ ಆರೋಪಿತರು ಬೈದಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗರ್ಭಿಣಿಯಾಗಿದ್ದಾಗ ಚಾಸಾಃ 1 ರವರನ್ನು ತವರು ಮನೆಗೆ ಕರೆದುಕೊಂಡು ಬಂದಿದ್ದು, ಹೆರಿಗೆ ಆದಾಗ ಆರೋಪಿಯು ನೋಡಲು ಬಂದಿಲ್ಲ ಎಂದು ನಾನು ಪೋಲಿಸರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ಯಾದಗಿರಿಯಲ್ಲಿ ಮಲ್ಲನಗೌಡ ಹಾಗೂ ನಾಗನಗೌಡ ಎಂಬುವವರ ಸಮಕ್ಷಮ ಪಂಚಾಯಿತಿ ಮಾಡಿದ್ದೆವು. ಪಂಚಾಯಿತಿಯಲ್ಲಿ ಹಾಜರಿದ್ದ ಎಲ್ಲಾರ ಹೆಸರು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಆರೋಪಿತರ ಮನೆಯ ಅಕ್ಕ-ಪಕ್ಕ ಲಕ್ಷ್ಮೀ, ಪದ್ದಮ್ಮ ಹಾಗೂ ಬಳಿಚಕ್ರ ರಾಮಣ್ಣ ರವರ ಮನೆಗಳು ಇದ್ದಾವೆ. 1 ನೇ ಆರೋಪಿಯ ತಂಗಿ ಹಾಗೂ ಅವರ ಗಂಡ ತಮ್ಮ ಮಗನನ್ನು ಆರೋಪಿತರ ಮನೆಯಲ್ಲಿ ಬಿಟ್ಟು ಬೆಂಗಳೂರಿಗೆ ದುಡಿಯಲು ಹೋಗಿದ್ದರು ಎಂದರೆ ಸಾಕ್ಷಿಯು ಮಗನನ್ನು ಬಿಟ್ಟಿದ್ದರು ಆದರೆ ದುಡಿಯಲು ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ಅವರ ಮಗನನ್ನು ನೋಡಿಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾಃ 1 ಹಾಗೂ 1 ನೇ ಆರೋಪಿಯ ನಡುವೆ ಮನಸ್ತಾಪ ಆಗಿತ್ತು ಎಂದರೆ ಸರಿ. ಚಾಸಾಃ 1 ರವರು ರಾಯಚೂರು ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿ 1 ನೇ ಆರೋಪಿಯಿಂದ ಜೀವನಾಂಶ ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಚಾಸಾಃ 1 ರವರು ತವರು ಮನೆಯಲ್ಲಿಯೇ ಇರುವ ಇಚ್ಛೆ ಹೊಂದಿರುವುದರಿಂದ ಸುಳ್ಳು ದೂರು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ರಾಯಚೂರು ಮತ್ತು ಯಾದಗಿರಿಯಲ್ಲಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಚಾಸಾಃ 1 ರವರು ಸುಳ್ಳ ದೂರು ನೀಡಿದ್ದು, ನಾನು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ